**ಕರ್ನಾಟಕ ಸರ್ಕಾರ**

**(ಪಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

<u>ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,</u>

<u>ಹಾಸನ</u>

<u>ಸ್ಪೆಷಲ್ ಕೇಸ್ ನಂಬರ್ :: **140/2015**</u>

ಪ್ರಾಸಾ-11 ಚಾಸಾ- 13

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಮನೋಹರ್ ಪಿ.ಎನ್ |
| ತಂದೆಯ ಹೆಸರುಃ | ಃ | ನಾರಾಯಣ ಭಟ್ |
| ವಯಸ್ಸುಃ | ಃ | 64 ವರ್ಷ |
| ಉದ್ಯೋಗಃ | ಃ | ನಿವೃತ್ತ ಚೀಫ್ ಮ್ಯಾನೇಜರ್, ಎಸ್.ಬಿ.ಐ. ಹಾಸನ ಶಾಖೆ |
| ವಾಸಃ | ಃ | ಬೆಂಗಳೂರು |

<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ **09-03-2023**ಃ</u>

<u>ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ</u>

1. ನಾನು ಜುಲೈ 2014 ರಿಂದ ಜುಲೈ 2015 ರ ತನಕ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹಾಸನ ಶಾಖೆಯಲ್ಲಿ ಚೀಫ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಾಸನ ಲೋಕಾಯುಕ್ತ ಪೊಲೀಸರು ಆರೋಪಿ ಮಂಜುನಾಥನಿಗೆ ಸಂಬಂಧಪಟ್ಟ ಬ್ಯಾಂಕ್ ಸ್ಟೇಟ್ ಮೆಂಟ್ ದಾಖಲೆಯನ್ನು ದಿನಾಂಕ 08.07.2014 ರ ಪತ್ರದಂತೆ ಕೇಳಿದ್ದು, ಸದರಿ ಪತ್ರ ನಮಗೆ ದಿನಾಂಕ 11.07.2014 ರಂದು ಬಂದಿರುತ್ತದೆ. ಈಗ ತೋರಿಸಿದ ದಾಖಲೆಯು ಸದರಿ ಕೋರಿಕೆ ಪತ್ರ ಆಗಿದ್ದು ಅದನ್ನು ಸ್ವೀಕರಿಸಿದ ಬಗ್ಗೆ ಅದರಲ್ಲಿ ನಮ್ಮ ಬ್ಯಾಂಕಿನ ಮೊಹರು ಇರುತ್ತದೆ. ಸದರಿ ಪತ್ರವನ್ನು ನಿಶಾನೆ.ಪಿ.81 ಎಂದು

ಮತ್ತು ಅದನ್ನು ನಮ್ಮ ಬ್ಯಾಂಕಿನಲ್ಲಿ ಸ್ವೀಕರಿಸಿದ ಬಗ್ಗೆ ಅದರಲ್ಲಿರುವ ಬ್ಯಾಂಕಿನ ಮೊಹರನ್ನು ದಿನಾಂಕದ ಜೊತೆಯಲ್ಲಿ ನಿಶಾನೆ.ಪಿ.81(ಎ) ಎಂದು ಗುರುತಿಸಲಾಗಿದೆ. ಸದರಿ ಕೋರಿಕೆ ಮೇರೆಗೆ ನಾನು ದಿನಾಂಕ 21-10-2014 ರಂದು ಆರೋಪಿಗೆ ಸಂಬಂಧಪಟ್ಟ ಬ್ಯಾಂಕ್ ಖಾತೆಯ ಅಕೌಂಟ್ ಸ್ಟೇಟ್ ಮೆಂಟ್ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಸದರಿ ಅಕೌಂಟ್ ಸ್ಟೇಟ್ಮೆಂಟ್ ನೀಡಿರುವ ಬಗ್ಗೆ ಪತ್ರವಾಗಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪತ್ರವನ್ನು ನಿಶಾನೆ.ಪಿ.82 ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ.ಪಿ.82(ಎ) ಎಂದು ಗುರುತಿಸಲಾಗಿದೆ. ಈಗ ತೋರಿಸಿದ ನಿಶಾನೆ.ಪಿ.76 ರ ದಾಖಲೆಯು ನಾನು ತನಿಖಾಧಿಕಾರಿಗೆ ನೀಡಿದ ಆರೋಪಿಗೆ ಸಂಬಂಧಪಟ್ಟ ಬ್ಯಾಂಕ್ ಅಕೌಂಟ್ ಎಕ್ಸ್ಟ್ರ್ಯಾಕ್ಟ್ ದಾಖಲೆಯಾಗಿರುತ್ತದೆ.

3. ಅದೇ ದಿನ ಹಾಸನ ಲೋಕಾಯುಕ್ತ ಪೊಲೀಸರು ಆರೋಪಿಯ ಪತ್ನಿ ಪದ್ಮಾವತಿ ಇವರಿಗೆ ಸಂಬಂಧಪಟ್ಟ ಬ್ಯಾಂಕ್ ಸ್ಟೇಟ್ ಮೆಂಟ್ ದಾಖಲೆಯನ್ನು ದಿನಾಂಕ 08.07.2014 ರ ಪತ್ರದಂತೆ ಕೇಳಿದ್ದು, ಸದರಿ ಪತ್ರ ನಮಗೆ ದಿನಾಂಕ 11.07.2014 ರಂದು ಬಂದಿರುತ್ತದೆ. ಈಗ ತೋರಿಸಿದ ದಾಖಲೆಯು ಸದರಿ ಕೋರಿಕೆ ಪತ್ರ ಆಗಿದ್ದು ಅದನ್ನು ಸ್ವೀಕರಿಸಿದ ಬಗ್ಗೆ ಅದರಲ್ಲಿ ನಮ್ಮ ಬ್ಯಾಂಕಿನ ಮೊಹರು ಇರುತ್ತದೆ. ಸದರಿ ಪತ್ರವನ್ನು ನಿಶಾನೆ.ಪಿ.83 ಎಂದು ಮತ್ತು ಅದನ್ನು ನಮ್ಮ ಬ್ಯಾಂಕಿನಲ್ಲಿ ಸ್ವೀಕರಿಸಿದ ಬಗ್ಗೆ ಅದರಲ್ಲಿರುವ ಬ್ಯಾಂಕಿನ ಮೊಹರನ್ನು ದಿನಾಂಕದ ಜೊತೆಯಲ್ಲಿ ನಿಶಾನೆ.ಪಿ.83(ಎ) ಎಂದು ಗುರುತಿಸಲಾಗಿದೆ. ಸದರಿ ಕೋರಿಕೆ ಮೇರೆಗೆ ನಾನು ದಿನಾಂಕ 21.10.2014 ರಂದು ಆರೋಪಿಯ ಪತ್ನಿಗೆ ಸಂಬಂಧಪಟ್ಟ ಬ್ಯಾಂಕ್ ಖಾತೆಯ ಅಕೌಂಟ್ ಸ್ಟೇಟ್ ಮೆಂಟ್ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಸದರಿ ಅಕೌಂಟ್ ಸ್ಟೇಟ್ ಮೆಂಟ್ ನೀಡಿರುವ ಬಗ್ಗೆ ಪತ್ರವಾಗಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪತ್ರವನ್ನು ನಿಶಾನೆ.ಪಿ.84 ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ.ಪಿ.84(ಎ) ಎಂದು ಗುರುತಿಸಲಾಗಿದೆ. ಈಗ ತೋರಿಸಿದ ದಾಖಲೆಯು ನಾನು ತನಿಖಾಧಿಕಾರಿಗೆ ನೀಡಿದ ಆರೋಪಿ ಪತ್ನಿಗೆ ಸಂಬಂಧಪಟ್ಟ ಬ್ಯಾಂಕ್ ಅಕೌಂಟ್ ಎಕ್ಸ್ಟ್ರ್ಯಾಕ್ಟ್ ದಾಖಲೆಯಾಗಿರುತ್ತದೆ. (ಆದರೆ ಸದರಿ ದಾಖಲೆಗೆ ಸಂಬಂಧಪಟ್ಟಂತೆ ಸಾಕ್ಷ್ಯ ಅಧಿನಿಯಮ ಕಲಂ 65 ಬಿಯಂತೆ ಯಾವುದೇ ಸರ್ಟಿಫಿಕೇಟ್ ನೀಡಿಲ್ಲ ಮತ್ತು ಅಂತಹ ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಬಾರದು ಎಂದು ಇದೇ ನ್ಯಾಯಾಲಯ ದಿನಾಂಕ 01.09.2022 ರಂದು ಆದೇಶ ಮಾಡಿರುತ್ತದೆ. ಈ ಕಾರಣದಿಂದ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಲ್ಲ.)

4. ದಿನಾಂಕ 17.01.2015 ರಂದು ಹಾಸನ ಲೋಕಾಯುಕ್ತ ಪೊಲೀಸರು ಶ್ರೀ ವೈ.ಕೊಟ್ಟೂರಪ್ಪ ಇವರಿಗೆ ಸಂಬಂಧಪಟ್ಟ ಬ್ಯಾಂಕ್ ಸ್ಟೇಟ್ ಮೆಂಟ್ ದಾಖಲೆಯನ್ನು ದಿನಾಂಕ 17.01.2015 ರ ಪತ್ರದಂತೆ ಕೇಳಿದ್ದು, ಸದರಿ ಪತ್ರ ನಮಗೆ ದಿನಾಂಕ 28.01.2015 ರಂದು ಬಂದಿರುತ್ತದೆ. ಈಗ ತೋರಿಸಿದ ದಾಖಲೆಯು ಸದರಿ ಕೋರಿಕೆ ಪತ್ರ ಆಗಿದ್ದು ಅದನ್ನು ಸ್ವೀಕರಿಸಿದ ಬಗ್ಗೆ ಅದರಲ್ಲಿ ನಮ್ಮ ಬ್ಯಾಂಕಿನ ಮೊಹರು ಇರುತ್ತದೆ. ಸದರಿ ಪತ್ರವನ್ನು ನಿಶಾನೆ.ಪಿ.85 ಎಂದು ಮತ್ತು ಅದನ್ನು ನಮ್ಮ ಬ್ಯಾಂಕಿನಲ್ಲಿ ಸ್ವೀಕರಿಸಿದ ಬಗ್ಗೆ ಅದರಲ್ಲಿರುವ ಬ್ಯಾಂಕಿನ ಮೊಹರನ್ನು ದಿನಾಂಕದ ಜೊತೆಯಲ್ಲಿ ನಿಶಾನೆ.ಪಿ.85(ಎ) ಎಂದು ಗುರುತಿಸಲಾಗಿದೆ. ಸದರಿ ಕೋರಿಕೆ ಮೇರೆಗೆ ನಾನು ದಿನಾಂಕ 28.01.2015 ರಂದು ಶ್ರೀ ವೈ.ಕೊಟ್ಟೂರಪ್ಪರವರಿಗೆ ಸಂಬಂಧಪಟ್ಟ ಬ್ಯಾಂಕ್ ಖಾತೆಯ ಅಕೌಂಟ್ ಸ್ಟೇಟ್ ಮೆಂಟ್ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಸದರಿ ಅಕೌಂಟ್ ಸ್ಟೇಟ್ ಮೆಂಟ್ ನೀಡಿರುವ ಬಗ್ಗೆ ಪತ್ರವಾಗಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪತ್ರವನ್ನು ನಿಶಾನೆ.ಪಿ.86 ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ.ಪಿ.86(ಎ) ಎಂದು ಗುರುತಿಸಲಾಗಿದೆ. ಈಗ ತೋರಿಸಿದ ದಾಖಲೆಯು ನಾನು ತನಿಖಾಧಿಕಾರಿಗೆ ನೀಡಿದ ಶ್ರೀ ವೈ.ಕೊಟ್ಟೂರಪ್ಪರವರಿಗೆ ಸಂಬಂಧಪಟ್ಟ ಬ್ಯಾಂಕ್ ಅಕೌಂಟ್ ಎಕ್ಸ್ಟ್ರ್ಯಾಕ್ಟ್ ದಾಖಲೆಯಾಗಿರುತ್ತದೆ. (ಆದರೆ ಸದರಿ ದಾಖಲೆಗೆ ಸಂಬಂಧಪಟ್ಟಂತೆ ಸಾಕ್ಷ್ಯ ಅಧಿನಿಯಮ ಕಲಂ 65 ಬಿಯಂತೆ ಯಾವುದೇ ಸರ್ಟಿಫಿಕೇಟ್ ನೀಡಿಲ್ಲ ಮತ್ತು ಅಂತಹ ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಬಾರದು ಎಂದು ಇದೇ ನ್ಯಾಯಾಲಯ ದಿನಾಂಕ 01.09.2022 ರಂದು ಆದೇಶ ಮಾಡಿರುತ್ತದೆ. ಈ ಕಾರಣದಿಂದ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಲ್ಲ.)

**<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಎನ್.ವಿ. ವಕೀಲರಿಂದಃ-</u>**

5. ನಿಶಾನೆ.ಪಿ.76 ರಂತೆ ಅಕೌಂಟ್ ಎಕ್ಸ್ಟ್ರ್ಯಾಕ್ಟ್ ನೀಡುವಾಗ ಅದನ್ನು ಬ್ಯಾಂಕರ್ಸ್ ಬುಕ್ ಎವಿಡೆನ್ಸ್ ಆ್ಯಕ್ಟ್ ನ ಪ್ರಕಾರ ನಾವು ದೃಢೀಕರಿಸಿಕೊಡಬೇಕು ಎಂಬುದು ಸರಿ. ಈಗ ತೋರಿಸಿದ ನಿಶಾನೆ.ಪಿ.76 ರ ದಾಖಲೆಯನ್ನು ಆ ರೀತಿ ನಾವು ದೃಢೀಕರಿಸಿದ್ದು ಕಂಡುಬರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**